ಶ್ರೀ ಎಂ.ಸಿ. ಬಸಪ್ಪ.—ಕಳೆದ ಅಧಿವೇಶನದಲ್ಲಿ ಉತ್ತರಿಸುತ್ತಾ ಹೇಳಿದಿರಿ, ಇನ್ನು ೫ ವರ್ಷಗಳಲ್ಲಿ ಅವರ ಸೇವೆಯನ್ನು ಖಾಯಂಗೊಳಿಸುತ್ತೇವೆ ಎಂದು ವರ್ಷಕ್ಕೆ ಐದನೇ ಒಂದು ಭಾಗದಂತೆ ೨೦ ವರ್ಷಗಳಿಗಿಂತಲೂ ಹೆಚ್ಚು ಸೇವೆ ಸಲ್ಲಿಸಿದಂತವರು ಇದ್ದರೆ ಅವರನ್ನು ಮೊದಲು ಖಾಯಂಗೊಳಿಸುತ್ತೇವೆಂದು ಹೇಳಿದ್ದೀರಿ. ಈಗ ಇನ್ನೂ ತಮ್ಮ ವಿಶೇಷ ನಿಯಮಗಳು ಆಗಿಲ್ಲ. ಅಷ್ಟರಲ್ಲಿ ಕೆಲವರು ನಿವೃತ್ತರಾಗ ಬಹುದು, ಆದ್ದರಿಂದ ಅಂಥವರಿಗೆಲ್ಲ ವಿನಿಮಂ ರಿಲೀಫ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಎಸ್. ಬಂಗಾರಪ್ಪ.—ಅವರ ಸೇವೆಯನ್ನು ಕಾನೂನು ಪ್ರಕಾರ ಕ್ರಮಗೊಳಿಸುವವರೆಗೆ ಈಗಿರುವ ನಿಯಮಗಳ ಪ್ರಕಾರ ಏನೇನು ಲಭ್ಯವಾಗುತ್ತದೋ ಅಷ್ಟನ್ನು ನೀಡಬೇಕಾಗುತ್ತದೆ. ಮುಂದೆ ನಿಯಮಗಳನ್ನು ಮಾಡಿ ಖಾಯಂಗೊಳಿಸತಕ್ಕ ಆಜ್ಞೆ ಹೊರಡುವುದಕ್ಕೆ ಮೊದಲು ಏನಾದರೂ ರಿಟೈರ್ ಆದರೆ ಅಂಥವರಿಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂಬುದು ತಮಗೂ ಗೊತ್ತಿದೆ. ಆ ರೀತಿ ಆಗ ಬಾರದೆಂದೇ ಶೀಘ್ರಗತಿಯಲ್ಲಿ ಮಾಡಬೇಕೆಂದು ಮಾಡುತ್ತಿದ್ದೇವೆ. ಅದಕ್ಕೋಸ್ಕರವೇ ೫ ವರ್ಷ ಕಾಲವನ್ನು ನಿಗದಿ ಮಾಡಿದ್ದೇವೆ ಮತ್ತು ಅದೇರೀತಿ ನಿಯಮಗಳನ್ನು ಮಾಡುತ್ತಿದ್ದೇವೆ.

SRI G. B. SHANKAR RAO.— They are not regular employees of the department. If the Government have to treat them as regular salaried servants and make them eligible for pension, what would be the additional burden on the exchequer by way of salary and pension and what is the total number of gangmen ?

SRI S. BANGARAPPA.— There are two sets of people who work in the department. The persons working in the work-charged establishment number about 13.0 0 ; the number of persons working as gangmen is 11,000 : total number is 24,000. So far as gangmen are concerned the financial burden is Rs. 2½ crores and as far as work-charged establishment is concerned there is no trouble because we have been paying their salaries and not much of financial burden. That is why we thought of regularising their services within a period of five years so that financial implication will not be there in one year.

Taking over Mysore Electrical Industries Ltd

637. SRI S.M.SHEERNALY CHANDRASEKHAR (Hosanagar). –Will the Minister for Industries and Commerce be pleased to state.—

(a) whether the Government intend to take over the Mysore Electrical Industries Ltd. ;

(b) whether it has come to the notice of Government that the Central Government has refused to take over the same under Industrial Development and Regulation Act ;

(c) if so, whether the reasons are known to the Govt. about their refusal ?

SRI AZEEZ SAIT (Minister for Industries and Commerce)—(a) By an Ordinance promulgated by the Governor of Karnataka the majority

of shares in the Mysore Electrical Industries Ltd., has been taken over by Government on 13th January 1979.

(b) No.

(c) Does not arise.

Answers are as printed, I would like to tell the hon. member that is an old question. The industry has been taken over anp has stated functioning. The Bill has been passed in this House. If still there are questions to be put, I will answer.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನನ್ನ ಪ್ರಶ್ನೆಗೆ ಮಾನ್ಯ ಆಜೀಜ್‌ಸೇಠರು ಇದೇ ರೀತಿ ಹೇಳುತ್ತಿದ್ದಾರೆ. ತಾಪ್ಪ ಗಮನಿಸಿರಬಹುದು ; ನನ್ನ ಎರಡನೇ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಆದರೆ ಒಬ್ಬ ಶಾಸಕ ಪ್ರಶ್ನೆ ಕೇಳಬೇಕಾದರೆ ಮಾಹಿತಿ ಇಲ್ಲದೆ ಕೇಳುವುದಿಲ್ಲ. ಈ ಒಂದು ಕೈಗಾರಿಕಾ ಸಂಸ್ಥೆ ಅಪ್ರಯೋಜಕವಾದುದು, ಆದ್ದರಿಂದ ಇದನ್ನು ವಹಿಸಿಕೊಳ್ಳುವುದು ಬೇಡವೆಂದು ಕೇಂದ್ರ ಸರ್ಕಾರದವರು ತಿರಸ್ಕರಿಸಿದ್ದರೂ ಕೂಡ ಹೇಗಾದರೂ ಮಾಡಿ ಈ ಕೈಗಾರಿಕೆಯನ್ನು ಕೇಂದ್ರ ಸರ್ಕಾರಕ್ಕೆ ವಹಿಸಬೇಕೆಂದು ಸತತ ಪ್ರಯತ್ನ ಮಾಡಿದ್ದಾರೆ. ಆದರೂ ಕೂಡ ತಾವು ಇಲ್ಲವೆಂದು ಉತ್ತರಿಸಿದ್ದೀರಿ. ಆದ್ದರಿಂದ ಈ ಬಗ್ಗೆ ಪರಿಶೀಲನೆ ಮಾಡಿ ಉತ್ತರಿಸಿದ್ದೀರಾ ?

† SRI AZEEZ SAIT.— The industry to which my hon. friend is referring to was in a very bad shape. The financial institutions were in favour of Thana Electricity Board in Bombay. But the Government of India have stated no. But the N. G. E. F. and the B. E. M. L. were thinking at the same time. With the consent of the Government we have taken over.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನಿಮಗೆ ಅಲ್ಲ, ಕೇಂದ್ರ ಸರ್ಕಾರದ ಪರಿಮಿತಿಯೊಳಗೆ ಈ ಕೈಗಾರಿಕೆ ಬರುವಂತೆ ಮಾಡಬೇಕೆಂದು ಪ್ರಯತ್ನ ನಡೆಸಿದರು ; ದೆಹಲಿಯಲ್ಲಿ ಕುಳಿತುಕೊಂಡು ಲಕ್ಷಗಟ್ಟಲೆ ಲುಕ್ಷಾನಾದ ಕೈಗಾರಿಕೆ ಇದು. ಎಲ್ಲಿ ಫೆಯಿಲ್ ಆದಮೇಲೆ ತಮ್ಮ ನೆರಳಿಗೆ ಬಂದಿದ್ದಾರೆ. ಇದು ತಮಗೆ ಗೊತ್ತಿದೆಯೆ ?

SRI AZEEZ SAIT.— It is not correct. The N. G. E. F. was thinking because it was the sister unit and manufacturing same kind of products. We were eager to reduce the competition between these units. Whatever it is, we have taken over.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.— ಈಗ ನಮ್ಮ ಸರ್ಕಾರದವರು ಈ ಒಂದು ಕೈಗಾರಿಕೆಯನ್ನು ತೆಗೆದುಕೊಂಡದ್ದರಿಂದ ಬಹಳಷ್ಟು ಅದರ ಬಗ್ಗೆ ಗುಸು ಗುಸು ಮಾತು ಕೇಳಿಬರುತ್ತಿದೆ. There is something fishy about it. ಈ ವಿಚಾರದಲ್ಲಿ ಬಹಳ ಆಪಾದನೆಗಳು ಇವೆ. ಯಾವ ಕಾರಣಕ್ಕಾಗಿ ಸರ್ಕಾರದವರು ಅದನ್ನು ತೆಗೆದುಕೊಂಡಿದ್ದಾರೆ ? ಅದನ್ನು ತೆಗೆದುಕೊಂಡ ಮೇಲೆ ಡಿವಿಡೆಂಡ್ ಬಂದಿದೆಯೇ ? ಏನಾದರೂ ಲಾಭಾಂಶ ಬಂದಿದೆಯೇ ? ಈ ಕೈಗಾರಿಕೆ ಈಗ ಲಾಭದಾಯಕವಾಗಿದೆಯೇ ಎಂಬುದಕ್ಕೆ ತಾವು ಉತ್ತರ ಕೊಡಬೇಕು.

SRI AZEEZ SAIT.— There is no question of dividend now because we have takenover the industry only in the month of January this year. We have no finance : we had approached the Canara Bank and the Syndicate Bank for financial assistance. We were able to get Rs one crore from these banks. We have made

available to this amount to the industry. Out of Rs one crore, fifty lakhs have gone towards the payment of salary and arrears to the workers, With Rs 50 lakhs we have started the work. This is a relief undertaking. We have to give one year holiday to this industry. My friend must wait and see how this industry functions.

Junior College at Manvi Town, Raichur District

751. SRI R. AMBANNA NAIK (Manvi).— Will the Minister for Education be pleased to state: —

(a) the amount sanctioned for the construction of six rooms in the Junior College premises of Manvi City of Raichur District; the stage at which the construction work of the said Building stands;

(b) whether it has come to the notice of the Government that the post of the principal, Junior College Manvi City is vacant since a long time; whether the Government intend to arrange for the appointment of a principal immediately?

SRI B. SUBBAYYA SHETTY (Minister for Education).—

(a) A sum of Rs. 1,29,000 has been sanctioned by the Government for construction of six new rooms in Government Junior College, Manvi in Government Order No.ED 44 SBH 76 dated 2nd March 1977. The name of the Junior College Manvi was included in this Year's Budget and the construction work of the building has come to the roof level.

(b) Yes.
Yes.

ಶ್ರೀ ಆರ್. ಅಂಬಣ್ಣ ನಾಯಕ್.— ಸ್ವಾಮಿ, ರಾಯಚೂರು ಜಿಲ್ಲೆಯ ಮಾನ್ವಿ ಟೌನ್‌ನಲ್ಲಿರುವ ಕಿರಿಯ ಮಹಾವಿದ್ಯಾಲಯಕ್ಕೆ ಸೇರಿದ ನಿವೇಶನದಲ್ಲಿ ೬ ಕೋಣೆಗಳ ಒಂದು ಶಾಲಾ ಕಟ್ಟಡವನ್ನು ಯಾವಾಗ ಪೂರ್ತಿಗೊಳಿಸುತ್ತೀರಿ ? ಮತ್ತು ಈ ವರ್ಷದಲ್ಲಿ ಅಲ್ಲಿ ತರಗತಿಗಳನ್ನು ನಡೆಸುವುದಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡುವುದಕ್ಕಾಗುತ್ತದೆಯೇ ?

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಅಲ್ಲಿ ೬ ಹೊಸ ಕೋಣೆಗಳನ್ನು ನಿರ್ಮಿಸಲು ಸರ್ಕಾರ ೧,೨೯,೦೦೦ ರೂಪಾಯಿಗಳನ್ನು ಮಂಜೂರು ಮಾಡಿದೆ. ಕಟ್ಟಡದ ಕೆಲಸ ಛಾವಣಿವರೆಗೆ ಮಾತ್ರ ಮುಗಿದಿದೆ. ಈ ವರ್ಷ ಕೂಡ ಅದಕ್ಕಾಗಿ ನಾವು ಹಣಕಾಸನ್ನು ಇಟ್ಟಿದ್ದೇವೆ. ಅದನ್ನು ಆದಷ್ಟು ಬೇಗ ಪೂರ್ತಿಗೊಳಿಸುತ್ತೇವೆ. ಮತ್ತು ಅಲ್ಲಿ ಪ್ರಾಚಾರ್ಯರ ಹುದ್ದೆ ಖಾಲಿ ಇದೆ. ಅದನ್ನೂ ಭರ್ತಿ ಮಾಡುತ್ತೇವೆ.

ಶ್ರೀ ಆರ್. ಅಂಬಣ್ಣ ನಾಯಕ್.— ಸ್ವಾಮಿ, ಈ ವರ್ಷದಲ್ಲಿ ಅಲ್ಲಿ ಕ್ಲಾಸ್‌ಗಳನ್ನು ಕಂಡಕ್ಟ್ ಮಾಡುವುದಕ್ಕೆ ಅನುಕೂಲವಾಗುತ್ತದೆಯೇ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಈ ವರ್ಷ ಕಟ್ಟಡದ ಕೆಲಸ ಛಾವಣಿಯವರೆಗೆ ಬಂದಿದೆ. ಈ ವರ್ಷ ಅದನ್ನು ಮುಗಿಸಿಕೊಡುತ್ತೇವೆ.